	ತಾ: ಮುಂಡಗೋಡ	ಅನುದಾನ ವಿತರಿಸಬೇಕಿದೆ
34	ಶ್ರೀ ಹನುಮಂತಪ್ಪ ಗುತ್ತೆಪ್ಪ ತಿಮ್ಮಾಪೂರ, ಸಾ: ಕೊಡಂಬಿ ತಾ: ಮುಂಡಗೋಡ	2000 ಅನುದಾನ ವಿತರಿಸಬೇಕಿದೆ
35	ಶ್ರೀ ಯಲ್ಲಪ್ಪ ರುದ್ರಪ್ಪ ಶೆಟ್ಟಪ್ಪನವರ ಸಾ: ಅಜ್ಜಳ್ಳಿ ತಾ: ಮುಂಡಗೋಡ	1000ಅನುದಾನ ವಿತರಿಸಬೇಕಿದೆ
36	ಶ್ರೀಮತಿ ಯಲ್ಲವ್ವ ಶೆಟ್ಟಪ್ಪನವರ ಸಾ: ಅಜ್ಜಳ್ಳಿ ತಾ: ಮುಂಡಗೋಡ	1000 ಅನುದಾನ ವಿತರಿಸಬೇಕಿದೆ
37	ಶ್ರೀ ನಾರಾಯಣ ತಿಮ್ಮನಾಯ್ಕ, ಸಾ: ಗೋಳಗೋಡ, ತಾ: ಸಿದ್ದಾಪುರ	1500 ಅನುದಾನ ವಿತರಿಸಬೇಕಿದೆ
	22 ಪ್ರಕರಣಗಳಿಗೆ ರೂ. 57770 ವಿತರಿಸಿದ್ದು, 15 ಪ್ರಕರಣಗಳಿಗೆ ರೂ. 30200 ವಿತರಿಸಬೇಕಿದೆ	87900

ರಸ್ತೆ ಕಾಮಗಾರಿ

1870 (3120); ಶ್ರೀ ಚಿಕ್ಕಮಾದು ಎಸ್. (ಹೆಚ್. ಡಿ. ಕೋಟೆ)

ಅ) ಜಿಲ್ಲಾ ಹೆದ್ದಾರಿಗಳಿಗೆ ಎಷ್ಟು ಮೀಟರ್ ಅಗಲ ಡಾಂಬರೀಕರಣ ಮಾಡಲಾಗುತ್ತದೆ;

ಆ) ಈ ಅಗಲೀಕರಣ ಡಾಂಬರ್ ರಸ್ತೆಯಲ್ಲಿ ಏಕಕಾಲದಲ್ಲಿ ಎರಡು ವಾಹನಗಳು ಏಕಕಾಲದಲ್ಲಿ ಸುರಕ್ಷಿತವಾಗಿ ಚಲಿಸುತ್ತದೆಯೇ;

ಇ) ರಸ್ತೆಯ ಎರಡು ಬದಿಯಲ್ಲಿ 1 ಅಡಿಯಿಂದ 2 ಅಡಿಯ ಗುಂಡಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಸರ್ಕಾರ ಏನು ಕ್ರಮ ಕೈಗೊಂಡಿದೆ;

ಈ) ಎಲ್ಲಾ ಹೆದ್ದಾರಿಗಳು ವಿಶೇಷವಾಗಿ ಮಲೆನಾಡು ಅರೆ ಮಲೆನಾಡು ಪ್ರದೇಶಗಳಲ್ಲಿ ಮಳೆ ಹಾನಿಯಿಂದ ರಸ್ತೆಗಳು ಗುಂಡಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ 1 ಕಿ. ಮೀ. ರಸ್ತೆ ದುರಸ್ತಿ ಕಾಮಗಾರಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗುತ್ತಿದೆ?

ಡಾ. ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಸಂಚರಿಸುವ ವಾಹನಗಳ ಸಾಂದ್ರತೆಯನ್ನು ರಸ್ತೆ ಸಂಚಾರ ಗಣತಿಯ ಅಂಕಿ ಅಂಶಗಳ ಅನ್ವಯ ಐಆರ್‌ಸಿ–73 ನಿಯಮಗಳಂತೆ 5000 ಪಿಸಿಯು ಇದ್ದಲ್ಲಿ 5.50 ಮೀ. ಮಧ್ಯಮ ಪಥ ರಸ್ತೆ ಹಾಗೂ 5000 ಪಿಸಿಯು ಕ್ಕಿಂತ ಕಡಿಮೆ ಸಂಚಾರ ಇರುವ ರಸ್ತೆಗಳನ್ನು 3.75 ಮೀ. ಏಕಪಥ ರಸ್ತೆಯಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.

ಆ) ಸದರಿ ರಸ್ತೆಯ ಅಗಲವನ್ನು ಐಆರ್‌ಸಿ ಯಿಂದ ನಿಗದಿಪಡಿಸಲಾಗಿದ್ದು, ಇಂತಹ ರಸ್ತೆಗಳಲ್ಲಿ ಎರಡು ವಾಹನಗಳು ಏಕ ಕಾಲದಲ್ಲಿ ಸುರಕ್ಷಿತವಾಗಿ ಚಲಿಸಲು ಅವಕಾಶವಿರುತ್ತದೆ.

ಇ) ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಹಲವೆಡೆ ರಸ್ತೆಯ ಎರಡು ಬದಿ ಗುಂಡಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ರೀತಿಯಾಗಿ ಗುಂಡಿ ಬಿದ್ದಿರುವ ರಸ್ತೆಗಳ ಪ್ರತಿ ವರ್ಷ ನಿರ್ವಹಣೆಗಾಗಿ ಲೆಕ್ಕ ಶೀರ್ಷಿಕೆ 3054–ಯೋಜನೆ ಹಾಗೂ ಯೋಜನೇತರ ಮತ್ತು ಸಿಎಂಜಿಆರ್‌ವೈ/ ಯೋಜನೆ/ ಯೋಜನೇತರ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ರಸ್ತೆಗಳ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ.

ಈ) ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳು ಮಳೆಹಾನಿಯಿಂದ ಗುಂಡಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಸದರಿ ರಸ್ತೆಗಳನ್ನು ಪ್ರತಿ ವರ್ಷ ರಸ್ತೆಗಳ ನಿರ್ವಹಣೆಗಾಗಿ ವಿವಿಧ ಲೆಕ್ಕ ಶೀರ್ಷಿಕೆ ಅಡಿ ಒದಗಿಸಲಾಗುವ ಅನುದನದಲ್ಲಿ ತಗ್ಗು ಗುಂಡಿಗಳನ್ನು

ತುಂಬಿ ವಾಹನಗಳ ಸುಗಮ ಸಂಚಾರಕ್ಕೆ ರಸ್ತೆಗಳನ್ನು ಸುಸ್ಥಿತಿಯಲ್ಲಿರಿಸ ಲಾಗುತ್ತಿದೆ.

ಈ ರೀತಿ ರಸ್ತೆಗಳ ದುರಸ್ತಿಗೆ ಈ ಕೆಳಗಿನಂತೆ ಅನುದನ ಬಿಡುಗಡೆ ಮಾಡಲಾಗುತ್ತಿದೆ:

ರಾಜ್ಯ ಹೆದ್ದಾರಿಗೆ : ಸರಾಸರಿ `1.50 ಲಕ್ಷ ಪ್ರತಿ ಕಿ. ಮೀ. ಗೆ

ಜಿಲ್ಲಾ ಮುಖ್ಯ ರಸ್ತೆಗೆ: ಸರಾಸರಿ `1.00 ಲಕ್ಷ ಪ್ರತಿ ಕಿ. ಮೀ. ಗೆ.

ಪುರಸಭೆ ಎಸ್.ಎಫ್.ಸಿ. ಯೋಜನೆಯಡಿ ಅನುದಾನ

1879 (1590); ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ಪುರಸಭೆಗೆ 2014–15ನೇ ಸಾಲಿನ ಎಸ್.ಎಫ್.ಸಿ. ಯೋಜನೆಯಡಿ 160.74 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಬೇರೆ ಪಕ್ಷದ ಪುರಸಭೆಗಳಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ತಾರತಮ್ಯಕ್ಕೆ ಕಾರಣವೇನು; ಉದಾ: ವಿಜಾಪುರ–2.17 ಲಕ್ಷ, ದೇವನಹಳ್ಳಿ–2.17 ಲಕ್ಷ.

ಶ್ರೀ ಖಮರುಲ್ ಇಸಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) 2013–14ನೇ ಸಾಲಿನವರೆಗೆ ಎಸ್.ಎಫ್.ಸಿ. ಅನುದಾನವನ್ನು 2ನೇ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ಹಂಚಿಕೆ ಮಾಡಲಾಗು ತ್ತಿತ್ತು.

2014–15ನೇ ಸಾಲಿನಲ್ಲಿ ಎಸ್.ಎಫ್.ಸಿ. ಅನುದಾನವನ್ನು 3ನೇ ರಾಜ್ಯ ಹಣಕಾಸು ಆಯೋಗವು ಶಿಫಾರಸ್ಸು ಮಾಡಿರುವ ಮಾನದಂಡಗಳ ಅನ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡ ಲಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ 2011ರ ಜನ